ದಿನಾಂಕಃ17-11-2015. ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು

**ಪಾಟೀ ಸವಾಲುಃ 2ರಿಂದ 4ನೇ ಆರೋಪಿತರ ಪರವಾಗಿ ಶ್ರೀ ಆರ್. ಕೆ. ಎಂ. ವಕೀಲರಿಂದಃ**

4. ನಾವು ಆ ದಿನ ನಡೆದುಕೊಂಡು ಹೋಗುವಾಗ ನಾನು ಮುಂದೆ ಇದ್ದು ಚಾ.ಸಾ.1 ನನ್ನ ಹಿಂದಿನಿಂದ ಬರುತ್ತಿದ್ದು ಅವರ ಹಿಂದೆ ಚಾ.ಸಾ.3ರವರು ಇದ್ದರು. ನನ್ನ ಹಿಂದಿನಿಂದ ಏನಾಗುತ್ತಿತ್ತು ಎಂದು ನನಗೆ ಗೊತ್ತಾಗಿರಲಿಲ್ಲ. ಮಧ್ಯರಾತ್ರಿ 12.15ಗಂಟೆಗೆ ಈ ಘಟನೆ ಆಗಿತ್ತು. ಚಾ.ಸಾ.1ರವರ ಸರವನ್ನು ಯಾರಾದರೂ ಕಿತ್ತುಕೊಂಡು ಹೋಗುತ್ತಾರೆ ಎಂದು ಕಲ್ಪನೆ ಕೂಡ ನನಗೆ ಇರಲಿಲ್ಲ. ಆ ದಿನದ ಕಾರ್ಯಕ್ರಮದಲ್ಲಿ ನಾವು ಒಂದು ಗಂಟೆ ಕಾಲ ಭಾಗವಹಿಸಿದ್ದೆವು. ಅದೇ ದಿನ ರಾತ್ರಿ 12.30, 12.45ಗಂಟೆಗೆ ನಾವು ಪೋಲೀಸರ ಸಂಪರ್ಕಕ್ಕೆ ಬಂದಿರುತ್ತೇವೆ. ಆ ಹೊತ್ತಿನಲ್ಲಿ ನನ್ನ ಬಳಿ ಮತ್ತು ಚಾ.ಸಾ.3ರವರ ಬಳಿ ಮೊಬೈಲ್ ಫೋನ್ ಇತ್ತು. ಕಟ್ಟೆಯ ಬಳಿ ಪೋಲೀಸರು ಬಂದೋಬಸ್ತ್ ಕರ್ತವ್ಯದಲ್ಲಿದ್ದರು. ಆ ದಿನ ಕಟ್ಟೇ ಪೂಜೆ ಆಗಿದ್ದರಿಂದ ಸುಮಾರು 50-60 ಜನ ಸೇರಿರುತ್ತಾರೆ. ಸುಮಾರು 5-6 ಜನ ಪೋಲೀಸರು ಬಂದಿದ್ದರು. ನಾನು ಅಗರಭತ್ತಿ ಲೈನ್‌ಸೇಲ್ ಮಾಡುವ ಕೆಲಸ ಮಾಡುತ್ತೇನೆ. ಘಟನೆ ಆದ ದಿನ ನನಗೆ ಸರವನ್ನು ಯಾರು ಕಿತ್ತುಕೊಂಡು ಹೋಗಿದ್ದಾರೆ ಎಂದು ಹೆಸರು ಗೊತ್ತಿರಲಿಲ್ಲ. ಪೋಲೀಸರಲ್ಲಿ ಆ ದಿನ ಹೇಳುವಾಗ ಒಬ್ಬ ಮಾತ್ರ ಈ ಪ್ರಕರಣದಲ್ಲಿ ಭಾಗಿಯಾಗಿರುವ ಬಗ್ಗೆ ತಿಳಿಸಿರುತ್ತೇನೆ. ಪ್ರಥಮವಾಗಿ ಪೋಲೀಸರ ನಮ್ಮ ಸಂಪರ್ಕಕ್ಕೆ ಬಂದಾಗ ಪೋಲೀಸರಲ್ಲಿ ಆ ವ್ಯಕ್ತಿಯ ಹೆಸರು ಮತ್ತು ಚಹರೆ ಹೇಳಿರಲಿಲ್ಲ. ಪ್ರಥಮವಾಗಿ ಪೋಲೀಸರ ಸಂಪರ್ಕಕ್ಕೆ ಬಂದಾಗ ಎಲ್ಲಾ ವಿಚಾರ ಹೇಳಬೇಕು ಎಂದು ನನಗೆ ಗೊತ್ತಿದೆ. ಚಾ.ಸಾ.1ರವರು ಹೇಳಿದ ನಂತರ ನನಗೆ ಘಟನೆಯಲ್ಲಿ ಎಷ್ಟು ಜನ ಭಾಗಿಯಾಗಿದ್ದಾರೆ ಎಂದುನನಗೆ ತಿಳಿಯಿತು. ಚಿನ್ನದ ಕರಿಮಣಿ ಸರ ಎಲ್ಲಿಂದ ಖರೀದಿಸಿದ್ದಾರೆ ಎಂದುನನಗೆ ಮಾಹಿತಿ ಇಲ್ಲ. ಆ ಚಿನ್ನದ ಸರವನ್ನು ನಂತರ ಚಾ.ಸಾ.1ರವರು ಕೋಟೇಶ್ವರದ ಅಕ್ಕಸಾಲಿಗರಲ್ಲಿ ರಿಪೇರಿ ಮಾಡಿಸಿರುತ್ತಾರೆ. ಅದರ ಮೂಲ ರೂಪದಲ್ಲಿ ಈಗ ಬದಲಾವಣೆಯಾಗಿರುತ್ತದೆ,

5. 2ನೇ ಬಾರಿ ನಾನು ಪೋಲೀಸರ ಸಂಪಕಶಕ್ಕೆ ಬೆಳಗ್ಗಿನ ಜಾವ ಬಂದಿರುತ್ತದೆ. ಘಟನೆಗೆ ಮೊದಲು ನನಗೆ 1ರಿಂದ 3ರವರ ಮುಖ ಪರಿಚಯ ನನಗೆ ಇತ್ತು. ಅವರ ಬಗ್ಗೆ ನಾನು ಪ್ರಥಮವಾಗಿ ಪೋಲೀಸರು ನನ್ನ ಸಂಪರ್ಕಕ್ಕೆ ಬಂದಾಗ ತಿಳಿದಿರುವುದಿಲ್ಲ. ಮಾರನೇ ದಿನ ಕೂಡ

ಅವರ ಬಗ್ಗೆ ನಾನು ಪೋಲೀಸರಲ್ಲಿ ಹೇಳಿರುವುದಿಲ್ಲ. 45 ದಿನಗಳ ನಂತರ ಪೋಲೀಸರು ನನ್ನನ್ನು ಠಾಣೆಗೆ ಬರಲು ಹೇಳಿ ಅವರೇ ಕಳ್ಳತನ ಮಾಡಿದ್ದು ಎಂದು ಪೋಲೀಸರು ನನಗೆ ಹೇಳಿರುತ್ತಾರೆ. ನಾನು ಪೋಲೀಸ್ ಠಾಣೆಗೆ ಹೋದಾಗ ಚಾ.ಸಾ.1ರವರ ಚಿನ್ನದ ಸರ ಎಸ್‌ಐರವರ ಡ್ರಾವರ್‌ನಲ್ಲಿ ಇತ್ತು. ಅದನ್ನು ನನಗೆ ಅವರು ತೋರಿಸಿರುತ್ತಾರೆ. ಆಗ 1 ಮತ್ತು 2ನೇ ಆರೋಪಿತರು ಆ ದಿನ ಪೋಲೀಸ್ ಠಾಣೆಯ ಸೆಲ್‌ನ ಒಳಗೆ ಇದ್ದರು.

6. ನಾನು ಪೋಲೀಸ್ ಠಾಣೆಯಲ್ಲಿ ಎಷ್ಟು ಸಹಿಯನ್ನು ಹಾಕಿದ್ದೇನೆ ಎಂದು ನೆನಪಿಲ್ಲ. ಘಟನೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಾನು ಆ ದಿನ ಸ್ಥಳದಲ್ಲಿ ಇದ್ದದ್ದೇ ಇಲ್ಲ ಎಂದರೆ ಸರಿಯಲ್ಲ. ಮು.ಮಾ.1 ಮತ್ತು 2 ಚಾ.ಸಾ.1ರವರಿಗೆ ಸೇರಿದ್ದಲ್ಲ ಎಂದರೆ ಸರಿಯಲ್ಲ. ಚಾ.ಸಾ.1 ನನ್ನ ಅಕ್ಕ ಆಗಿದ್ದ ಕಾರಣ ಆಕೆಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾ.ಸಾ.1ರವರು ದೂರು ಕೊಡಲು ಹೋದಾಗ ನಾನು ಕೂಡ ಆಕೆಯ ಜೊತೆ ಹೋಗಿದ್ದೆ. ಚಾ.ಸಾ.1 ಸರ ಕಳ್ಳತನವಾದ ಬಗ್ಗೆ ದೂರು ಕೊಟ್ಟಿರುತ್ತಾರೆ. ಇಂತಹವರೇ ಎಂದು ಹೇಳಿರುವುದಿಲ್ಲ. ನಾವು ಆ ದಿನ ದೂರು ಕೊಡಲು ಹೋದಾಗ 3ಗಂಟೆಗಳ ಕಾಲ ಪೋಲೀಸ್ ಠಾಣೆಯಲ್ಲಿ ಇದ್ದೆವು. ಚಾ.ಸಾ.3 ಕೂಡ ನಮ್ಮ ಜೊತೆ ಇದ್ದರು.

ಪಾಟೀ ಸವಾಲುಃ 1ನೇ ಆರೋಪಿತನ ಪರ ವಕೀಲರು ಮೇಲ್ಕಂಡ ಪಾಟೀ ಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಕುಂದಾಪುರ